ಚಿಕ್ಕಬಳ್ಳಾಪುರ ಉಪವಿಭಾಗದಲ್ಲಿ ಬಸ್ ನಿಲ್ದಾಣದ ಸಮಸ್ಯೆ.

305(3640)

ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ.(ಚಿಕ್ಕಬಳ್ಳಾಪುರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಉಪ ವಿಭಾಗದಲ್ಲಿ ಬಸ್ ನಿಲ್ದಾಣದ ಸಮಸ್ಯೆ ದಿನೇ ದಿನೇ ಹೆಚ್ಚಾಗಿ ಸಾರ್ವಜನಿಕರ ಟೀಕೆಗಳಿಗೆ ಗುರಿಯಾಗುತ್ತಿರುವುದರಿಂದ ಸರ್ಕಾರ ಕೂಡಲೇ ಹೊಸ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡುವುದೇ?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ಸ್ಥಳೀಯ ಸಾರ್ವಜನಿಕರಿಂದ ಹಾಗೂ ಗಣ್ಯವ್ಯಕ್ತಿಗಳಿಂದ ಹಾಲಿಯಿರುವ ಬಸ್ ನಿಲ್ದಾಣಕ್ಕೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬೇಕೇ ಅಥವಾ ಬಸ್ ನಿಲ್ದಾಣವನ್ನು ಬೇರೆಡೆಗೆ ಸ್ಥಳಾಂತರಿಸಬೇಕೇ ಎಂಬ ಬಗ್ಗೆ ವಿಭಿನ್ನ ಅಭಿಪ್ರಾಯವಿರುವುದರಿಂದ ಈ ಬಗ್ಗೆ ಸ್ಥಳೀಯ ಪ್ರಮುಖರು ಮತ್ತು ಅಧಿಕಾರಿಗಳಿಂದ ಸಭೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕಾಗಿದ್ದು ಈ ಬಗ್ಗೆ ಸಭೆ ನಡೆಸಲು ಕ್ರಮ ಜರುಗಿಸಲಾಗುತ್ತಿದೆ.

ಶ್ರೀಮತಿ ಕೆ.ವಿ.ಅನುಸೂಯಮ್ಮ ನಟರಾಜನ್: ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸ್ಥಳೀಯ ಸಾರ್ವಜನಿಕರಿಂದ ಹಾಗೂ ಗಣ್ಯ ವ್ಯಕ್ತಿಗಳಿಂದ ನಿರ್ಣಯ ಮಾಡಬೇಕು ಎಂದು ಇದೆ. ಆದರೆ ಇದುವರೆಗೂ ಇದೇ ತರಹ ಹೊಸ ಬಸ್‌ನಿಲ್ದಾಣ ಆಗಬೇಕು ಎಂದು ಕೆಲವರು, ಹಳೆಯ ಬಸ್ ನಿಲ್ದಾಣ ಆಗಬೇಕೆಂದು ಕೆಲವರು ಇಲ್ಲಿ ಹೇಳಿಕೊಂಡು ಹೋಗುತ್ತಿದ್ದಾರೆ. ಇದು ಈಗ ಮನೆಮನೆಯ ಮಾತಾಗಿಬಿಟ್ಟಿದೆ. ಉದಯ ಟಿವಿ. ಮತ್ತು ಇನ್ನೂ ಅನೇಕ ಕಡೆಯಲ್ಲಿ ಚರ್ಚೆಯಾಗಿ ನಮ್ಮ ಚಿಕ್ಕಬಳ್ಳಾಪುರ ಬಸ್ ನಿಲ್ದಾಣದ ಬಗ್ಗೆ ತುಂಬಾ ಹೇಳಿಕೆಗಳು ಕೇಳಿಬರುತ್ತಿವೆ. ನಾನು ಕೇಳಿಕೊಳ್ಳುವುದೇನೆಂದರೆ ಸಂಬಂಧಪಟ್ಟ ಮಾನ್ಯ ಸಾರಿಗೆ ಸಚಿವರು ಇದರ ಬಗ್ಗೆ ದಯವಿಟ್ಟು ಯೋಚನೆ ಮಾಡಬೇಕು. ಮತ್ತು ಒಂದು ಒಳ್ಳೆಯ ನಿರ್ಣಯವನ್ನು ಕೂಡಲೇ ತೆಗೆದುಕೊಳ್ಳಬೇಕು. ಏಕೆಂದರೆ ಹೊಸ ಬಸ್ ನಿಲ್ದಾಣವನ್ನು ಹಿಂದಿನ ಸರ್ಕಾರದವರು ಕೆರೆಯಲ್ಲಿ ಕಟ್ಟಿದ್ದಾರೆ. ಕೆರೆಯಲ್ಲಿ ಬಸ್ ನಿಲ್ದಾಣ ಮಾಡಿರುವುದರಿಂದ ತುಂಬಾ ತೊಂದರೆ ಇದೆ. ಇದರ ಬಗ್ಗೆ ಪತ್ರಿಕೆಗಳಲ್ಲಿ ಕೂಡ ಬಂದಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಆದರೆ ಹಳೆ ಬಸ್‌ನಿಲ್ದಾಣದಲ್ಲಿ ಮೂರೂವರೆ ಎಕರೆ ಜಾಗ ಇದೆ. ಅಲ್ಲಿ ರಾಷ್ಟ್ರೀಯ ಹೆದ್ದಾರಿ ಇದೆ ಮತ್ತು ಮಹಾತ್ಮಾಗಾಂಧಿ ರಸ್ತೆ ಇನ್ನೊಂದು ಕಡೆ ಇದೆ. ಆದರೆ ಅದೇ ಹೊಸ ಬಸ್ ನಿಲ್ದಾಣ ಇರುವ ಕಡೆ ರಾಷ್ಟ್ರೀಯ ಹೆದ್ದಾರಿ ಏನೂ ಇಲ್ಲ. ಎಲ್ಲ ಕಡೆಯಿಂದಲೂ ಬಸ್ಸುಗಳು ಹೋಗಬೇಕು ಎಂದರೆ ಹಳೆ ಬಸ್ ನಿಲ್ದಾಣದಲ್ಲಿ ನಾಲ್ಕು ಕಡೆಯೂ ನಾಲ್ಕು ರಸ್ತೆಗಳು ಇವೆ. ಆದರೆ ಹೊಸ

ಬಸ್‌ನಿಲ್ದಾಣದಲ್ಲಿ ಒಂದೇ ಒಂದು ರಸ್ತೆ ಇದೆ. ಒಂದೇ ಸಲಕ್ಕೆ ಎರಡು ಬಸ್ಸುಗಳು ಬಂದರೆ ಹೋಗುವುದಕ್ಕೆ ತುಂಬಾ ತೊಂದರೆಯಾಗುತ್ತದೆ. ಮತ್ತೆ ಹಳೆಯ ಬಸ್‌ನಿಲ್ದಾಣದಲ್ಲಿ ಕಚೇರಿಗಳು ಇವೆ, ಸರ್ಕಾರಿ ಆಸ್ಪತ್ರೆ ಇದೆ, ರೈಲ್ವೆ ಸ್ಟೇಷನ್ ಇದೆ. ಹೊಸ ಬಸ್‌ನಿಲ್ದಾಣದಲ್ಲಿ ಯಾವ ಕಚೇರಿಗಳೂ ಇಲ್ಲ.....

ಚೇರ್ಮನ್: ಏವರಣೆ ಬೇಡ, ನೇರವಾಗಿ ಪ್ರಶ್ನೆ ಕೇಳಿ.

ಶ್ರೀಮತಿ ಕೆ.ಎ.ಅನುಸೂಯಮ್ಮ ನಟರಾಜನ್: ಹಳೆಯ ಬಸ್‌ನಿಲ್ದಾಣವನ್ನೆ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಹೊಸ ಬಸ್‌ನಿಲ್ದಾಣ ಇರುವಲ್ಲಿ ಬರೇ ಶಾಲಾಕಾಲೇಜುಗಳು, ವಸತಿಗಳು ಇವೆ. ಆದರೆ ಹಳೆ ಬಸ್‌ನಿಲ್ದಾಣದಲ್ಲಿ ಎಲ್ಲಾ ಕಚೇರಿಗಳು ಇವೆ. ಇದರಿಂದ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ. ಅಲ್ಲಿ ಮೂರೂವರೆ ಎಕರೆ ಜಮೀನು ಕೂಡ ಇದೆ. ಆದ್ದರಿಂದ ಹಳೇ ಬಸ್ ನಿಲ್ದಾಣವನ್ನೆ ದಯವಿಟ್ಟು ಮಾಡಬೇಕೆಂದು ಮತ್ತು ಈ ಬಗ್ಗೆ ಅತಿಬೇಗ ನಿರ್ಣಯ ತೆಗೆದುಕೊಂಡು ಹಳೆ ಬಸ್‌ನಿಲ್ದಾಣವನ್ನೆ ಅಭಿವೃದ್ಧಿ ಮಾಡಬೇಕೆಂದು ಸಂಬಂಧಪಟ್ಟ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕಿಯವರ ಕೋರಿಕೆಯಂತೆ ನಾನೇ ಸ್ವತಃ ಅವರ ಕ್ಷೇತ್ರಕ್ಕೆ ಭೇಟಿ ಕೊಟ್ಟು ಅಲ್ಲಿಯ ಲೋಕಸಭಾ ಸದಸ್ಯರು ಮತ್ತು ಅಲ್ಲಿಯ ಅಧಿಕಾರಿಗಳೊಡನೆ ಮಾತನಾಡಿ, ಸ್ಥಳ ವೀಕ್ಷಣೆ ಮಾಡಿದ್ದೇನೆ. ಇಲ್ಲಿ ಕೆಲವು ಭಿನ್ನ ಅಭಿಪ್ರಾಯಗಳು ಇವೆ. ಇದರ ಜೊತೆಗೆ ಹಿಂದೆ ಮಾಡಿದಂಥ ಬಸ್‌ನಿಲ್ದಾಣ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಬರುತ್ತದೆ. ಈಗ ಮಾಡಿರುವಂಥ ಬಸ್‌ನಿಲ್ದಾಣ ಊರಿನ ಒಳಗಡೆ ಇದೆ. ಅದಕ್ಕೆ ಯೋಗ್ಯವಾದ ರಸ್ತೆ ಇಲ್ಲದೇ ಇರುವುದು ನನ್ನ ಗಮನಕ್ಕೆ ಬಂದಿದೆ. ಅದಕ್ಕಾಗಿ ಎಲ್ಲಾ ಅಧಿಕಾರಿಗಳ ಅಭಿಪ್ರಾಯಗಳನ್ನು ಕ್ರೋಢೀಕರಿಸಿಕೊಂಡು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಇದನ್ನು ಮಾಡುವುದೇ ಅಥವಾ ಇರುವಂಥ ಬಸ್‌ನಿಲ್ದಾಣವನ್ನೆ ಅಭಿವೃದ್ಧಿ ಪಡಿಸುವುದೇ ಎಂಬುದರ ಬಗ್ಗೆ ಈಗಾಗಲೇ ಮಾಹಿತಿಯನ್ನು ಸಂಗ್ರಹಿಸಿದ್ದೇವೆ. ತಕ್ಷಣ ನಮ್ಮ ಗೌರವಾನ್ವಿತ ಶಾಸಕಿಯವರ ಜೊತೆ ಹಾಗೂ ಲೋಕಸಭಾ ಸದಸ್ಯರ ಜೊತೆ ಚರ್ಚೆ ನಡೆಸಿ ಈ ಬಸ್ ನಿಲ್ದಾಣದ ಬಗ್ಗೆ ನಾವು ತೀರ್ಮಾನ ಮಾಡುತ್ತೇವೆ.

ಶ್ರೀಮತಿ ಕೆ.ಎ.ಅನುಸೂಯಮ್ಮ ನಟರಾಜನ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರು ನಿರ್ದಿಷ್ಟವಾಗಿ ಒಂದು ಸಮಯ ಹೇಳಬೇಕು. ನಾನು ಎರಡು ವರ್ಷಗಳಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಚಿಕ್ಕಬಳ್ಳಾಪುರದಲ್ಲಿ ನಮ್ಮ ಶಾಸಕರು ಒಂದು ಬಸ್ ನಿಲ್ದಾಣವನ್ನು ಮಾಡಿಸಲಿಲ್ಲ ಎಂದು ಜನ ಕೇಳುತ್ತಿದ್ದಾರೆ. ಇಂತಿಷ್ಟು ಸಮಯದಲ್ಲಿ ಬಸ್ ನಿಲ್ದಾಣವನ್ನು ಮಾಡಿಕೊಡುತ್ತೇನೆಂದರೆ ಸಂತೋಷವಾಗುತ್ತದೆ. ಏಕೆಂದರೆ ಸಾರ್ವಜನಿಕರು ನನ್ನನ್ನು ತುಂಬಾ ಪ್ರಶ್ನೆ ಮಾಡುತ್ತಿದ್ದಾರೆ.

ಶ್ರೀ ಪಿ.ಆರ್.ಸಗೀರ್ ಅಹಮ್ಮದ್: ಮಾನ್ಯ ಅಧ್ಯಕ್ಷರೇ, ಈಗ ನಾನು ಹೇಳಿದ ಹಾಗೆ ಅವರಿಗೂ ತಿಳುವಳಿಕೆಯನ್ನು ನೀಡಿದ್ದೇನೆ. ಆ ಭಾಗದಲ್ಲಿ ಹಾದು ಹೋಗುವಂತಹ ರಾಷ್ಟ್ರೀಯ ಹೆದ್ದಾರಿ, ಜೊತೆಗೆ ಅಲ್ಲಿರುವಂತಹ ನಗರಸಭೆಯ ಜಾಗ ಮತ್ತೆ ಬಸ್ ನಿಲ್ದಾಣಕ್ಕೆ ಬೇಕಾಗಿರುವಂತಹ ಉಳಿದ ಜಾಗ ಈ ಎಲ್ಲಾ ವಿಷಯಗಳ ಬಗ್ಗೆ ಒಂದು ಚರ್ಚೆ ಮಾಡಲು ಒಂದು ಸಭೆ ಮಾಡಿ ತಕ್ಷಣವೇ ಸರ್ಕಾರ ಒಂದು ತೀರ್ಮಾನಕ್ಕೆ ಬಂದು, ಆ ಭಾಗದಲ್ಲಿ ತಕ್ಷಣವೇ ಒಂದು ಬಸ್ ನಿಲ್ದಾಣವನ್ನು ಮಾಡಿಕೊಡುತ್ತೇವೆ.

ಶ್ರೀಮತಿ ಕೆ.ವಿ.ಅನುಸೂಯಮ್ಮ ನಟರಾಜನ್: ನಿರ್ದಿಷ್ಟವಾದ ಸಮಯ ತಿಳಿಸಲಿಲ್ಲ. ಈ ವರ್ಷವೇ ಆದರೆ ತುಂಬಾ ಸಂತೋಷ. ರಾಷ್ಟ್ರೀಯ ಹೆದ್ದಾರಿಯಲ್ಲಿ ಮಾಡಿಕೊಟ್ಟರೆ ಅನುಕೂಲ.

ಶ್ರೀ ಪಿ.ಆರ್.ಸಗೀರ್ ಅಹಮ್ಮದ್: ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಿದೆ ಅಂದರೆ ನಾನೇ ಸ್ವತಃ ಆ ಜಾಗವನ್ನು ವೀಕ್ಷಣೆ ಮಾಡಿದ್ದೇನೆ. ಅವರ ಊರಿಗೆ ಹೋಗಿದ್ದೇನೆ. ಬಸ್ ನಿಲ್ದಾಣದ ಹಳೆ ಜಾಗ, ಹೊಸ ಜಾಗ, ಹೊಸ ಬಸ್‌ನಿಲ್ದಾಣ, ಹಳೆ ಬಸ್ ನಿಲ್ದಾಣ ಎಲ್ಲಾ ನೋಡಿದ್ದೇನೆ. ಅಲ್ಲಿರುವಂತಹ ಸಮಸ್ಯೆ ಏನು ಎಂದು ಹೇಳಿದರೆ ಚಿಕ್ಕಬಳ್ಳಾಪುರ ನಗರ ದಿನನಿತ್ಯ ಬೆಳೆಯುತ್ತಿದೆ. ಅದಕ್ಕೆ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿಯೇ ಬಸ್ ನಿಲ್ದಾಣ ಮಾಡುವುದೇ, ಅಥವಾ ಈ ಹಿಂದೆ ಮಾಡಿರುವ ಬಸ್‌ನಿಲ್ದಾಣವನ್ನು ಅಭಿವೃದ್ಧಿ ಮಾಡುವುದೇ ಎನ್ನುವ ಬಗ್ಗೆ ಚರ್ಚೆ ನಡೆಸಿದ್ದೇವೆ. ಆ ಭಾಗದ ಲೋಕಸಭಾ ಸದಸ್ಯರೂ ಸಹ ನನ್ನ ಜೊತೆ ಸಮಾಲೋಚನೆ ನಡೆಸಿದ್ದಾರೆ. ಆ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಅಲ್ಲಿನ ಅಧಿಕಾರಿಗಳು ಎಲ್ಲಾ ರೀತಿಯ ಮಾಹಿತಿ ಕೊಡುವಂತೆ ನಾನು ಸೂಚನೆ ನೀಡಿದ್ದೇನೆ. ಈ ಎಲ್ಲಾ ಮಾಹಿತಿಯನ್ನು ಕ್ರೋಢೀಕರಿಸುತ್ತಿದ್ದೇನೆ ನಾನು ಶಾಸಕರ ಜೊತೆ ಮತ್ತು ಲೋಕಸಭಾ ಸದಸ್ಯರ ಜೊತೆ ಚರ್ಚೆ ಮಾಡಿ ಅವರ ತೀರ್ಮಾನದಂತೆ ಯಾವ ಜಾಗದಲ್ಲಿ ಬಸ್ ನಿಲ್ದಾಣ ಕಟ್ಟಬೇಕು ಈ ವರ್ಷದಲ್ಲಿಯೇ ಆ ಕೆಲಸ ಪ್ರಾರಂಭ ಮಾಡುತ್ತೇವೆ.

ಯಾವಗಲ್ ಮತ್ತು ಶಿರೋಳ ಗ್ರಾಮಗಳಿಗೆ ಬಸ್‌ನಿಲ್ದಾಣಗಳ ಅವಶ್ಯಕತೆ.

312(3608)

ಶ್ರೀ ಯಾವಗಲ್ ಬಿ.ಆರ್.(ನರಗುಂದ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಗುಂದ ಮತ ಕ್ಷೇತ್ರದ ಯಾವಗಲ್ ಮತ್ತು ಶಿರೋಳ ಗ್ರಾಮಗಳಿಗೆ ಬಸ್ ನಿಲ್ದಾಣಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?